| | | | |
|---|---|---|---|
| | | ಔಷಧಿಗಳನ್ನು ನಮ್ಮ ಜಿಲ್ಲೆಯಲ್ಲಿಯೂ ಸಹ ನಿಷಿದ್ಧಗೊಳಿಸುವ ಬಗ್ಗೆ ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉತ್ತರಿಸುತ್ತಾ, ಡ್ರಗ್ಸ್ ಕಂಟ್ರೋಲರ್ ರವರಿಗೆ ಬೇರೆ ರಾಜ್ಯಗಳಲ್ಲಿ ನಿಷಿದ್ಧಗೊಳಿಸಿರುವ ಔಷಧಿಗಳ ಪಟ್ಟಿಯನ್ನು ನೀಡುವಂತೆ ಕೋರಿದ್ದು, ಔಷಧಿಗಳ ಪಟ್ಟಿಯನ್ನು ಪಡೆದು ಹಾಸನ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಉಪಯೋಗಿಸದಂತೆ, ನಿಷಿದ್ಧಗೊಳಿಸಲು ಕ್ರಮ ವಹಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಾಸನ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಗೆ ಸೇರಿದ ಅನೇಕ ದೊಡ್ಡ ಕೆರೆಗಳಿವೆ. ಆದರೆ ಕೆರೆಗಳಲ್ಲಿರುವ ಮೀನುಗಳನ್ನು ಹಿಡಿಯಲು ಹಾಸನ ನಗರದಲ್ಲಿರುವ 3 ಮೀನುಗಾರರ ಸಹಕಾರ ಸಂಘದವರಿಗೇ ಮಾತ್ರ ಕೆರೆ ಗುತ್ತಿಗೆಯನ್ನು ನೀಡುತ್ತಿರುವುದು ಕಂಡುಬಂದಿದೆ. ಇದರಿಂದ, ಸ್ಥಳೀಯ ಮೀನುಗಾರರಿಗೆ ಅನಾನುಕೂಲವಾಗಿರುತ್ತದೆ. ಆದ್ದರಿಂದ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೀನುಗಾರಿಕೆ ಕಸುಬನ್ನು ಮಾಡಿಕೊಂಡಿರುವವರಿಗೆ ಉತ್ತೇಜನವನ್ನು ನೀಡಿ ಮೀನುಗಾರರ ಸಹಕಾರ ಸಂಘಗಳನ್ನು ರಚನೆ ಮಾಡಲು ಕ್ರಮ ವಹಿಸಬೇಕೆಂದು ತಿಳಿಸಿದರು.<br>ಯೋಜನಾ ನಿರ್ದೇಶಕರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ವತಿಯಿಂದ ರಚಿಸಿರುವ ಸ್ವಸಹಾಯ ಸಂಘಗಳಿಗೆ ಕೆರೆ ಗುತ್ತಿಗೆ ಹರಾಜು ಮಾಡುವ ಬಗ್ಗೆ ನಿರ್ದೇಶಕರು ಮೀನುಗಾರಿಕೆ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದು ಅಭಿಪ್ರಾಯವನ್ನು ಪಡೆದು ಕ್ರಮ ವಹಿಸಬೇಕೆಂದು ತಿಳಿಸಿದರು. | |
| | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

(ಬಿ.ಆರ್.ಸತ್ಯನಾರಾಯಣ),
ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ
ಮತ್ತು ಯೋಜನಾ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.

| | | | |
|---|---|---|---|
| | | ನವೆಂಬರ್ 2011 \| 510504 \| 152826812<br>ಡಿಸೆಂಬರ್ 2011 \| 44050143 \| 163659082<br>ಜನವರಿ 2012 \| 469940581 \| 146058230 | ಅಕ್ಟೋಬರ್ 2011 \| 421125815 \| 111136745<br>ನವೆಂಬರ್ 2011 \| 510504 \| 152826812<br>ಡಿಸೆಂಬರ್ 2011 \| 44050143 \| 163659082<br>ಜನವರಿ 2012 \| 469940581 \| 146058230 |
| 2 | ಜಿಲ್ಲಾ ಪಂಚಾಯತ್ ಹಾಸನಕ್ಕೆ 2011-12ನೇ ಸಾಲಿನ 4ನೇ ತ್ರೈಮಾಸಿಕ ಅನುದಾನ ಹಾಗೂ ಕೇಂದ್ರ / ಇತರೆ ಅನುದಾನ ಬಿಡುಗಡೆಯಾದ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ಆವ್ಯ/ಅಧೀ-1/4/ಹಕಾಸ್ಥಾ/ಟಿಪ್ಪಣಿ/2011-12 ದಿನಾಂಕ: 23-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಜಿಲ್ಲಾ ಪಂಚಾಯಿತಿ ಹಾಸನಕ್ಕೆ 2011-12ನೇ ಸಾಲಿನ 4ನೇ ತ್ರೈಮಾಸಿಕ ಅನುದಾನ ಹಾಗೂ ಕೇಂದ್ರ/ಇತರೆ ಅನುದಾನ ಬಿಡುಗಡೆಯಾಗಿರುವ ಬಗ್ಗೆ ಸಭೆಯ ಅವಗಾಹನೆಗೆ ಮಂಡಿಸಿದರು. | ಜಿಲ್ಲಾ ಪಂಚಾಯಿತಿ ಹಾಸನಕ್ಕೆ 2011-12ನೇ ಸಾಲಿನ 4ನೇ ತ್ರೈಮಾಸಿಕ ಅನುದಾನ ಹಾಗೂ ಕೇಂದ್ರ/ಇತರೆ ಅನುದಾನ ಬಿಡುಗಡೆಯಾಗಿರುವ ಬಗ್ಗೆ ಸಭೆಯು ಅವಗಾಹಿಸಿತು. |
| | | ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸಾಲಗಾಮೆಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ 5 ಮಕ್ಕಳು ಮಾತ್ರ ಇದ್ದು, 22 ಮಕ್ಕಳಿಗೆ ಹಾಜರಾತಿಯನ್ನು ಹಾಕಿರುತ್ತಾರೆ. ಈ ಬಗ್ಗೆ ಇಲಾಖಾ ಅಧಿಕಾರಿಗಳು ಪರಿಶೀಲಿಸಿ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಉಪ ಕಾರ್ಯದರ್ಶಿ (ಆಡಳಿತ)ರವರು ಮಾತನಾಡುತ್ತಾ, ಆಯುಕ್ತರು, ಹಿಂದುಳಿದ ವರ್ಗಳ ಇಲಾಖೆ, ಬೆಂಗಳೂರು ಇವರು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಿದ್ದರೂ ಸಹ ಹಾಜರಾತಿಯನ್ನು ಹಾಕುತ್ತಿರುವ ಬಗ್ಗೆ ಇಲಾಖಾಧಿಕಾರಿಗಳು ಪರಿಶೀಲಿಸಿ ಕ್ರಮ ವಹಿಸಬೇಕೆಂದು ಪತ್ರ ಬರೆದಿರುತ್ತಾರೆ. ಆದ್ದರಿಂದ, ಇಲಾಖಾಧಿಕಾರಿಗಳು ಆಗಿಂದಾಗ್ಗೆ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕೆಲವು ಔಷಧಿಗಳನ್ನು ಬೇರೆ ರಾಜ್ಯಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ನಿಷಿದ್ಧಗೊಳಿಸಿದ್ದಾರೆ. ಆದರೆ ಅದೇ ಔಷಧಿಗಳನ್ನು ಕರ್ನಾಟಕ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನೂ ಖರೀದಿಸಿ ರೋಗಿಗಳಿಗೆ ನೀಡುತ್ತಿದ್ದಾರೆ. ಆದ್ದರಿಂದ, ಬೇರೆ ರಾಜ್ಯಗಳಲ್ಲಿ ಯಾವ ಯಾವ ಔಷಧಿಗಳನ್ನು ನಿಷಿದ್ಧಗೊಳಿಸಿದ್ದಾರೆ ಅಂತಹ | ಸಭೆಯಲ್ಲಿ ಚರ್ಚಿಸಿದ ವಿಷಯಗಳ ಮೇಲೆ ಸಂಬಂಧಪಟ್ಟ ಇಲಾಖಾಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕೆಂದು ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

# ದಿನಾಂಕ: 02-04-2012 ಅಪರಾಹ್ನ:03-00ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಬಿ.ಆರ್. ಸತ್ಯನಾರಾಯಣ,

ಅಧ್ಯಕ್ಷರು,

ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

ಹಾಜರಿ:06 ಗೈರು ಹಾಜರಿ: 01

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td colspan="4">ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು.</td></tr>
<tr><td>1</td><td>ಸೆಪ್ಟೆಂಬರ್ 2011 ರಿಂದ ಜನವರಿ 2012ರವರೆಗಿನ ಮಾಹೆಯ ಮಾಸಿಕ ಲೆಕ್ಕಗಳ ಅನುಮೋದನೆ ಬಗ್ಗೆ.</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ ಸಂಕಲನ/ ಮಾಸಿಕ ಲೆಕ್ಕ/2011-12 ದಿನಾಂಕ: 21-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಮುಖ್ಯ ಲೆಕ್ಕಾಧಿಕಾರಿಯವರು ಪ್ರಸ್ತಾಪಿಸುತ್ತಾ, ಜಿಲ್ಲಾ ಪಂಚಾಯಿತಿ ಹಾಸನದ ಸೆಪ್ಟೆಂಬರ್ 2011ರಿಂದ ಜನವರಿ 2012ರವರೆಗಿನ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆಗಳು ಚಲನ್ ಮತ್ತು ಓಚರ್ ಗಳು ಸ್ವೀಕೃತವಾಗಿರುತ್ತದೆ. ಖಜಾನೆಯಿಂದ ಸ್ವೀಕೃತವಾದ ಒಟ್ಟು ಜಮೆ ಮತ್ತು ಖರ್ಚಿನ ವಿವರಗಳನ್ನು ಪ್ರಧಾನ ಲೆಕ್ಕ ಶೀರ್ಷಿಕೆವಾರು ಸಂಕಲನ ಗಣಕೀಕರಣದಲ್ಲಿ ತಯಾರಿಸಲಾಗಿದೆ. ಸದರಿ ಸಂಕಲನದ ತ:ಖ್ತೆಯ ವಿವರ ರಾಜಸ್ವ ಜಮೆ ವೆಚ್ಚ ಮತ್ತು ಜಮಾ ಶೀರ್ಷಿಕೆಗಳ ಲೆಕ್ಕ, ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರ ಕೆಳಗಿನಂತಿದೆ ಸೆಪ್ಟೆಂಬರ್ 2011ರಿಂದ ಮತ್ತು ಜನವರಿ 2012ರವರೆಗಿನ ವಿವರ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅನುಮೋದನೆ ನೀಡಲು ಮಂಡಿಸಿದೆ.<br><br><table><tr><th>ತಿಂಗಳು</th><th>ಜಮೆ</th><th>ಖರ್ಚು</th></tr><tr><td>ಸೆಪ್ಟೆಂಬರ್ 2011</td><td>2734888</td><td>101410964</td></tr><tr><td>ಅಕ್ಟೋಬರ್ 2011</td><td>421125815</td><td>111136745</td></tr></table></td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br><br>ಮುಖ್ಯ ಲೆಕ್ಕಾಧಿಕಾರಿಯವರು ಕೋರಿರುವಂತೆ ಜಿಲ್ಲಾ ಪಂಚಾಯಿತಿ ಹಾಸನದ ಸೆಪ್ಟೆಂಬರ್2011ರಿಂದ ಜನವರಿ 2012ರ ಮಾಹೆ ವರೆಗಿನ ಜಮಾ ಮತ್ತು ಖರ್ಚಿನ ತ:ಖ್ತೆ ರಾಜಸ್ವ ಜಮೆ ವೆಚ್ಚಗಳಿಗೆ ಸಭೆಯು ಸರ್ವಾನು ಮತದಿಂದ ಅನುಮೋದನೆ ನೀಡಿತು.<br><br><table><tr><th>ತಿಂಗಳು</th><th>ಜಮೆ</th><th>ಖರ್ಚು</th></tr><tr><td>ಸೆಪ್ಟೆಂಬರ್ 2011</td><td>2734888</td><td>101410964</td></tr></table></td></tr>
</table>

5. ಶ್ರೀಮತಿ ಸಿ.ಎನ್.ರತ್ನಮ್ಮ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
6. ಶ್ರೀಮತಿ ಡಿ.ಜಿ.ಅಂಬಿಕಾ ರಾಮಣ್ಣ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
7. ಶ್ರೀ ಎನ್.ಡಿ.ಕಿಶೋರ್, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
9. ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
10. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
11. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನರವರ ಆಪ್ತಶಾಖೆಗೆ
12. ಉಪ ಕಾರ್ಯದರ್ಶಿ(ಆಡಳಿತ), ಜಿಲಾ ಪಂಚಾಯಿತಿ, ಹಾಸನ.
13. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
16. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
17. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
18. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಳುಹಿಸುತ್ತಾ, ಪೂರ್ಣ ಮಾಹಿತಿಯೊಂದಿಗೆ ಇಲಾಖಾ ಮುಖ್ಯಸ್ಥರು ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.
19. ಉಪನಿರ್ದೇಶಕರು, ಮೂಲಭೂತ ಸೌಕರ್ಯಗಳ ಇಲಾಖೆ (ಭೂಸೇನಾ ನಿಗಮ), ಹಾಸನ.
20. ಕಛೇರಿ ಪ್ರತಿ.

# ಜಿಲ್ಲಾ ಪಂಚಾಯತ್, ಹಾಸನ.

ಸಂಖ್ಯೆ: ಜಿಪಂಹಾ/ಪ.ಶಾ/ 70 /2011-12 ದಿನಾಂಕ: 22-03-2012

## ಮುಂದೂಡಿದ ಸಭಾಹ್ವಾನ ಪತ್ರ

ಶ್ರೀ ಬಿ.ಆರ್.ಸತ್ಯನಾರಾಯಣ, ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 28-03-2012ರಂದು ಬುಧವಾರ ಪೂರ್ವಾಹ್ನ: 11-00ಗಂಟೆಗೆ ಕರೆಯಲಾಗಿದ್ದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯನ್ನು ಕಾರಣಾಂತರಗಳಿಂದ **ದಿನಾಂಕ: 02-04-2012ರಂದು ಸೋಮವಾರ ಅಪರಾಹ್ನ: 03-00ಗಂಟೆಗೆ** ಹಾಸನ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕರೆಯಲಾಗಿದೆ. ಸದರಿ ಸಭೆಗೆ ಮಾನ್ಯ ಸದಸ್ಯರುಗಳು ಹಾಜರಾಗಿ ಸಲಹೆ ಸಹಕಾರ ನೀಡಲು ಕೋರಲಾಗಿದೆ.

ಯೋಜನಾ ನಿರ್ದೇಶಕರು,
ಡಿ.ಆರ್.ಡಿ.ಎ ಕೋಶ, ಹಾಗೂ ಸದಸ್ಯ ಕಾರ್ಯದರ್ಶಿ
ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಸೆಪ್ಟೆಂಬರ್ 2011ರಿಂದ ಜನವರಿ 2012ರವರೆಗಿನ ಮಾಹೆಯ ಮಾಸಿಕ ಲೆಕ್ಕಗಳ ಅನುಮೋದನೆ ಬಗ್ಗೆ.
2. ಜಿಲ್ಲಾ ಪಂಚಾಯತ್ ಹಾಸನಕ್ಕೆ 2011-12ನೇ ಸಾಲಿನ 4ನೇ ತ್ರೈಮಾಸಿಕ ಅನುದಾನ ಹಾಗೂ ಕೇಂದ್ರ /ಇತರೆ ಹೆಚ್ಚುವರಿ ಮತ್ತಿತರೆ ವಿಶೇಷ ಅನುದಾನ ಬಿಡುಗಡೆಯಾದ ಬಗ್ಗೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಪ್ರತಿಯನ್ನು:

1. ಶ್ರೀ ಬಿ.ಆರ್.ಸತ್ಯನಾರಾಯಣ, ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
2. ಶ್ರೀ ಲಕ್ಷ್ಮಣಗೌಡ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
3. ಶ್ರೀಮತಿ ಭಾಗ್ಯ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
4. ಶ್ರೀ ಪುರುಷೋತ್ತಮ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ